ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಕವಿಪ್ರನಿನಿ/ಬಿ9/2013/07-08

ದಿನಾಂಕ : 20 MAR 2018

## ಸುತ್ತೋಲೆ

**ವಿಷಯ:-** ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ರ ಅಧಿನಿಯಮದ ಸಂಖ್ಯೆ 2 (ಡಿ) ರ ಪ್ರಕಾರ ಕವಿಪ್ರನಿನಿಯಲ್ಲಿ ಚಾಲ್ತಿಯಲ್ಲಿರುವ/ ಕೈಗೊಳ್ಳಲಾಗುವ ಸಮಗ್ರ ಕಾರ್ಯ ಗುತ್ತಿಗೆ / ಅಂಶಿಕ ಕಾರ್ಯ ಗುತ್ತಿಗೆ/ ಇತರೆ ಗುತ್ತಿಗೆ ಕಾಮಗಾರಿಗಳಲ್ಲಿ ಸಾಮಾಗ್ರಿ ಸರಬರಾಜು ವೆಚ್ಚ, ಕೂಲಿ ವೆಚ್ಚ ಮೊತ್ತದಲ್ಲಿ ಅನ್ವಯಿಸುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕದ ಮೊತ್ತವನ್ನು ಕಡಿತಗೊಳಿಸಿ ಸಂಬಂಧಿಸಿದ ಇಲಾಖೆಗೆ ಪಾವತಿಸುವ ಬಗ್ಗೆ.

**ಉಲ್ಲೇಖ:-**

1. ಸರ್ಕಾರದ ಆದೇಶ ಸಂಖ್ಯೆ: ಕಾಇ 300 ಎಲ್‌ಇಟಿ 2006 ದಿನಾಂಕ 18.01.2007 ಮತ್ತು ತಿದ್ದುಪಡಿ ದಿನಾಂಕ28.02.2007.
2. ಕವಿಪ್ರನಿನಿ ಆದೇಶ ಸಂಖ್ಯೆ:ಕವಿಪ್ರನಿನಿ/ಬಿ9/2013/07-08 ದಿನಾಂಕ 25.06.2007.
3. ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ ರವರಿಗೆ ಬರೆದ ಪತ್ರ ಸಂಖ್ಯೆ: ಅ.ಸ (ಲೆ ಮತ್ತು ಸಂ)/ಕೆಸಿಒ-19/6886/08-09 ದಿನಾಂಕ 21.11.2011.
4. ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ ರವರ ಪತ್ರ ಸಂಖ್ಯೆ: ಕಾಇ 338 ಎಲ್‌ಇಟಿ2011 ದಿನಾಂಕ 27.04.2012.
5. ಕವಿಪ್ರನಿನಿ ಪತ್ರ ಸಂಖ್ಯೆ: ಅ.ಸ (ಲೆ ಮತ್ತು ಸಂ)/ಕೆಸಿಒ-19/6886/08-09 ದಿನಾಂಕ 18.05.2012.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು ರವರ ಪತ್ರ ಸಂಖ್ಯೆ ಸಿಡಬ್ಲ್ಯೂ ಡಬ್ಲ್ಯೂಬಿ/ಸೆಸ್/ಸಿಆರ್-01/2012-13 ದಿನಾಂಕ 06.06.2012
7. ಕವಿಪ್ರನಿನಿ ಸುತ್ತೋಲೆ ಸಂಖ್ಯೆ: ಅ.ಸ (ಲೆ ಮತ್ತು ಸಂ)/ಕೆಸಿಒ-19/6886/08-09 ದಿನಾಂಕ 19.05.2012, 21.07.2012, 22.08.2012 ಮತ್ತು 28.08.2012.
8. ಮುಖ್ಯ ಇಂಜಿನಿಯರ್ (ಟಿ ಮತ್ತು ಪಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಸಿಇಇ (ಟಿ ಮತ್ತು ಪಿ)/ಸಿ(ಟಿ ಮತ್ತು ಪಿ)/ಕೆಸಿಒ65/2012-13 ದಿನಾಂಕ 13.03.2013.
9. ಕವಿಪ್ರನಿನಿ ಪತ್ರ ಸಂಖ್ಯೆ: ಅ.ಸ (ಲೆ ಮತ್ತು ಸಂ)/ಕೆಸಿಒ-19/6886/08-09 ದಿನಾಂಕ 08.01.2014, 01/01/2014 ಮತ್ತು 28.072015.
10. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಅ.ಸ. ಪತ್ರ ಸಂ: ಕವಿಪ್ರನಿನಿ/ಎಂಡಿ/ಪಿಎಸ್/2016-17/ಕೆಸಿಒ-19/6886/08-09/94 ದಿನಾಂಕ 21.03.2016 ಮತ್ತು 10.11.2016.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: ಕಾಇ 87 ಎಲ್‌ಇಟಿ 2016 ದಿನಾಂಕ 14.09.2016
12. ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ ರವರ ಪತ್ರ ಸಂಖ್ಯೆ: ಕಾಇ87 ಎಲ್‌ಇಟಿ 2016 ದಿನಾಂಕ 17.01.2018.

| | |
|---|---|
| EE (IT) | |
| EE (IT)-1 | |
| EE (MIS) | |
| DCA (IT) | |
| SEE (IT & MIS) | |

*******

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಕಾಯ್ದೆ 1996 ರ ಬಗ್ಗೆ ದಿನಾಂಕ 18/01/2007 ಹಾಗೂ 28/02/2007 ರ ಸರ್ಕಾರದ ಆದೇಶವನ್ನು (ಉಲ್ಲೇಖ-1) ಕವಿಪ್ರನಿನಿಯಲ್ಲಿ ಅಳವಡಿಸಿಕೊಂಡು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕವನ್ನು ಕಡಿತಗೊಳಿಸಿ, ಪಾವತಿಸಲು ದಿನಾಂಕ 25/06/2007 ರಲ್ಲಿನ ನಿಗಮದ ಆದೇಶದಲ್ಲಿ ಸೂಚಿಸಲಾಗಿರುತ್ತದೆ (ಉಲ್ಲೇಖ-2).

ಈ ಹಿನ್ನೆಲೆಯಲ್ಲಿ, ಸಮಗ್ರ ಗುತ್ತಿಗೆ / ಅಂಶಿಕ ಕಾರ್ಯ ಗುತ್ತಿಗೆ ಮತ್ತು ಇತರೆ ಗುತ್ತಿಗೆಗಳ ಮೂಲಕ ನೀಡಿರುವ ಕಾಮಗಾರಿಗಳಲ್ಲಿ ಸಾಮಾಗ್ರಿ ಸರಬರಾಜು ವೆಚ್ಚ, ಕೂಲಿ ವೆಚ್ಚದ ಮೊತ್ತಗಳಲ್ಲಿ ಅನ್ವಯಿಸುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿ ಕಲ್ಯಾಣ ಸುಂಕದ ಮೊತ್ತವನ್ನು ಕಡಿತಗೊಳಿಸಿ, ಸಂಬಂಧಿಸಿದ ಇಲಾಖೆಗೆ ಪಾವತಿಸುವ ಪ್ರಕ್ರಿಯೆಯನ್ನು ಪಾಲಿಸಲಾಗಿರುತ್ತದೆ. ಈ ಸಂಬಂಧ, ಹಲವು ಸರಬರಾಜುದಾರರು / ಗುತ್ತಿಗೆದಾರರು ಸಾಮಾಗ್ರಿ ಸರಬರಾಜು ಭಾಗಾಂಶ (Supply portion) ದ ಮೇಲೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕವನ್ನು ಕಡಿತಗೊಳಿಸುವ ಪ್ರಕ್ರಿಯೆಗೆ ಆಕ್ಷೇಪಣೆ ವ್ಯಕ್ತಪಡಿಸಿ, ಮನವಿಗಳನ್ನು ನೀಡಿದ್ದ ಹಿನ್ನೆಲೆಯಲ್ಲಿ, ದಿನಾಂಕ 21/01/2011 ರ ಪತ್ರದಲ್ಲಿ ಸರ್ಕಾರದ ಕಾರ್ಮಿಕ ಇಲಾಖೆಯಿಂದ ಸದರಿ ಅಂಶದ ಬಗ್ಗೆ ಸ್ಪಷ್ಟೀಕರಣ ಕೋರಲಾಗಿತ್ತು (ಉಲ್ಲೇಖ 3).

**ಈ ಮೇರೆಗೆ, ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ರವರು ದಿನಾಂಕ 27/04/2012 ರ ಪತ್ರದಲ್ಲಿ, ಕವಿಪ್ರನಿನಿಯಲ್ಲಿ ಕೈಗೊಳ್ಳಲಾಗಿರುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಯಂತ್ರೋಪಕರಣ ಸರಬರಾಜು ವೆಚ್ಚಕ್ಕೆ ಮತ್ತು ಸದರಿ ಸರಬರಾಜಿಗಾಗಿ ತಗಲುವ ವೆಚ್ಚದ ಮೊತ್ತಕ್ಕೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಡಿತಗೊಳಿಸುವುದು ಅನ್ವಯವಾಗುವುದಿಲ್ಲವೆಂದು ಹಾಗೂ ಸಿವಿಲ್ ಕಾಮಗಾರಿ ಮೇಲೆ ಮಾತ್ರ ಶೇ.1% ರಷ್ಟು ಸುಂಕವು ಅನ್ವಯವಾಗುವುದಾಗಿ ಸ್ಪಷ್ಟೀಕರಣ ನೀಡಲಾಗಿತ್ತು (ಉಲ್ಲೇಖ 4).**

ಈ ಸಂಬಂಧ, ಸಾಮಾಗ್ರಿ ಸರಬರಾಜು ಭಾಗಾಂಶ (Supply portion) ಹೊರತುಪಡಿಸಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕದ ಮೊತ್ತವನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಪಾವತಿಸಲು ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) ರವರ ಕಚೇರಿಯ ಸುತ್ತೋಲೆಗಳಲ್ಲಿ ತಿಳಿಸಲಾಗಿರುತ್ತದೆ (ಉಲ್ಲೇಖ 7).

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕೌಶಲ್ಯಭವನ, ಬೆಂಗಳೂರು ರವರ ದಿನಾಂಕ 06/06/2012 ರ ಪತ್ರದಲ್ಲಿ ಸಾಮಾಗ್ರಿ ಭಾಗಾಂಶವನ್ನು ಪರಿಗಣಿಸಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸುಂಕವನ್ನು ಪಾವತಿಸಿರುವ ಮೊತ್ತವನ್ನು ಹಿಂಪಾವತಿಸುವ ಬಗ್ಗೆ, ಸಾಮಾಗ್ರಿ ಸರಬರಾಜು ಭಾಗಾಂಶ (Supply portion) ದ ಮೇಲೆ ಕಡಿತಗೊಳಿಸಿರುವ ಸುಂಕದ ಮೊತ್ತವನ್ನು, ಪಾವತಿಸಿರುವ ವಿವರಗಳನ್ನು ಒದಗಿಸಿದ್ದಲ್ಲಿ, ಸದರಿ ಮೊತ್ತವನ್ನು ಮಂಡಳಿಯಿಂದ ಬಿಡುಗಡೆಗೊಳಿಸಿದ ನಂತರ ಸದರಿ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಬಹುದಾಗಿದೆ ಎಂದು ತಿಳಿಸಲಾಗಿತ್ತು (ಉಲ್ಲೇಖ 6).

ಕವಿಪ್ರನಿನಿಯಲ್ಲಿ ಸಾಮಾಗ್ರಿ ಸರಬರಾಜು ಭಾಗಾಂಶ (Supply portion) ದ ಮೇಲೆ ಸುಂಕದ ಮೊತ್ತವನ್ನು ಸರಬರಾಜುದಾರರು / ಗುತ್ತಿಗೆದಾರರಿಂದ ಕಡಿತಗೊಳಿಸಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ 2012 ನೇ ಸಾಲಿನವರೆಗೆ ಪಾವತಿಸಿರುವ ಸುಂಕದ ವಿವರಗಳನ್ನು ಸಂಬಂಧಿಸಿದ ಲೆಕ್ಕ ಘಟಕಗಳಿಂದ ಒದಗಿಸಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸುಂಕದ ಮಂಡಳಿಗೆ ಪಾವತಿಸಿರುವ ಒಟ್ಟು ರೂ.26,69,41,313/- ಗಳನ್ನು ಹಿಂತಿರುಗಿಸಲು ನಿಗಮದ ಹಲವಾರು ಪತ್ರಗಳಲ್ಲಿ ಕಾರ್ಮಿಕ ಇಲಾಖೆಯನ್ನು ಕೋರಿಲಾಗಿರುತ್ತದೆ (ಉಲ್ಲೇಖ 9 ಹಾಗೂ 10).

**ಈ ಸಂಬಂಧ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ ಇವರು ದಿನಾಂಕ 14/09/2016 ರ ಪತ್ರದಲ್ಲಿ (ಉಲ್ಲೇಖ 11) ನಿಗಮದ ವ್ಯವಸ್ಥಾಪಕ ನಿರ್ದೇಶಕರ ಅರೆ ಸರ್ಕಾರಿ ಪತ್ರ ದಿನಾಂಕ 21/03/2016 ರ ಪತ್ರದಲ್ಲಿನ ಅಂಶಗಳನ್ನು (ಉಲ್ಲೇಖ 10) ಕಾನೂನಾತ್ಮಕವಾಗಿ ಪರಿಶೀಲಿಸಿ ಸರ್ಕಾರದ ದಿನಾಂಕ 27/04/2012 ರ ಪತ್ರವನ್ನು (ಉಲ್ಲೇಖ 4) ಹಿಂಪಡೆಯಲಾಗಿರುವುದಾಗಿ ತಿಳಿಸಿರುತ್ತಾರೆ.**

ಆದರೆ ಸುಂಕದ ಮೊತ್ತವನ್ನು ಹಿಂತಿರುಗಿಸುವ ಬಗ್ಗೆ ಸ್ಪಷ್ಟತೆ ಇಲ್ಲದಿರುವುದರಿಂದ, ವ್ಯವಸ್ಥಾಪಕ ನಿರ್ದೇಶಕರ ದಿನಾಂಕ 10/11/2016 ರ ಅರೆ ಸರ್ಕಾರಿ ಪತ್ರದಲ್ಲಿ (ಉಲ್ಲೇಖ 10) ಹೆಚ್ಚುವರಿಯಾಗಿ ಪಾವತಿಸಿರುವ ಸಾಮಾಗ್ರಿ ಸರಬರಾಜು ಭಾಗಾಂಶ (Supply portion) ದ ಮೊತ್ತ ರೂ.26,69,41,313/- ಗಳನ್ನು ಹಿಂತಿರುಗಿಸಲು ಮತ್ತೊಮ್ಮೆ ಕೋರಲಾಗಿರುತ್ತದೆ.

**ಸದರಿ ಹಿನ್ನೆಲೆಯಲ್ಲಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಕಾಯ್ದೆ 1996 ಮತ್ತು ಸುಂಕ ಕಾಯ್ದೆ 1996 ರ ಕಲಂ 3, 2 (ಡಿ), 2 (ಐ) ಮತ್ತು 2 (ಜೆ) ಗಳಲ್ಲಿ ಹಾಗೂ ನಿಯಮ 3 ರ ನಿಯಮಗಳಲ್ಲಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ವಿವಿಧ ಸಿವಿಲ್ ಕಾಮಗಾರಿ ಮತ್ತು ಯಂತ್ರೋಪಕರಣಗಳ ಸರಬರಾಜು ಕೆಲಸ ಕಾರ್ಯಗಳಿಗೆ ಶೇ.1% ರಷ್ಟು ಸುಂಕವನ್ನು ವಸೂಲಾತಿಯಿಂದ ವಿನಾಯಿತಿಯನ್ನು ನೀಡಲು ನಿಯಮಗಳಲ್ಲಿ ಅವಕಾಶವಿಲ್ಲದಿರುವುದಾಗಿ, ಸಿವಿಲ್ ಕಾಮಗಾರಿಗಳು ಮತ್ತು ಯಂತ್ರೋಪಕರಣಗಳ ಸರಬರಾಜು ಇತ್ಯಾದಿ ಸಿವಿಲ್ ಕಾಮಗಾರಿಗಳೂ ಸಹ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ರ ಕಲಂ 3, 2 (ಡಿ), 2 (ಐ) ಮತ್ತು 2 (ಜೆ) ರ ವ್ಯಾಪ್ತಿಯಡಿ ಮತ್ತು ವ್ಯಾಖ್ಯಾನದೊಳಗೆ ಬರುವುದರಿಂದ, ಹಾಗೂ ಮಧ್ಯಪ್ರದೇಶ ರಾಜ್ಯದ ಮಾನ್ಯ ಉಚ್ಛನ್ಯಾಯಾಲಯದ ರಿಟ್‌ಪಿಟಿಷನ್ ಸಂಖ್ಯೆ 3956/2009 ರ ಆದೇಶವನ್ನು ಉಲ್ಲೇಖಿಸಿ ಕವಿಪ್ರನಿನಿಯಿಂದ ಈಗಾಗಲೇ ಪಾವತಿಸಲಾಗಿರುವ ಸಾಮಾಗ್ರಿ ಸರಬರಾಜು ಭಾಗಾಂಶ (Supply portion) ದ ಮೊತ್ತ ರೂ.26,69,41,313/- ಕ್ರಮಬದ್ಧವಾಗಿರುವುದಾಗಿ ತಿಳಿಸಿ, ಸದರಿ ಮೊತ್ತವನ್ನು ಮರುಪಾವತಿಸಲು ಕಾನೂನಿನಲ್ಲಿ ಅವಕಾಶವಿಲ್ಲವೆಂದು ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ರವರು ದಿನಾಂಕ 17/01/2018 ರ ಪತ್ರದಲ್ಲಿ ತಿಳಿಸಿರುತ್ತಾರೆ (ಉಲ್ಲೇಖ 12).**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಕಾಯ್ದೆ 1996 ರ ಅಧಿನಿಯಮ 2 (ಡಿ) ಯು ಈ ಕೆಳಕಂಡಂತೆ ಇರುತ್ತದೆ.

> *"Building or other construction work" means the construction alteration, repairs, maintenance or demotion of or, in relation to buildings, streets, roads railways, airfields, irrigation, drainage, embankment and navigation works, flood control works (including storm water drainage works), generation, transmission and distribution of power, water works (including channels for distribution of water), oil and gas installations, electric lines, wireless, radio, television, telephone, telegraph and overseas communications, dams, canals, reservoirs, watercourses, tunnels, bridges, viaducts, aqueducts, pipelines, towers, cooling towers, transmission towers and such other work as may be specified in this behalf by the appropriate Government by notification but does not include any building or other construction work to which the provision of the Factories Act 1948 (63 of 1948), or the Mines Act 1952 (35 OF 1952) apply:*

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಕಾಯ್ದೆ 1998 ರಲ್ಲಿನ ಅಧಿನಿಯಮ 3 ಈ ಕೆಳಕಂಡಂತೆ ಇರುತ್ತದೆ.

> *Levy of Cess: - For the purpose of levy of cess under sub-section (1) of section 3 of the Act. Cost of construction shall include all expenditure incurred by an employer in connection with the building or other construction work but shall not include-*
>
> - *Cost of land:*
> - *Any compensation paid or payable a worker or his kin under the Workmen's Compensation Act 1923.*

ಈ ಹಿನ್ನೆಲೆಯಲ್ಲಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಕಾಯ್ದೆ 1996 ಮತ್ತು ನಿಯಮಗಳು 1998 ರ ಪ್ರಕಾರ ಹಾಗೂ ಉಲ್ಲೇಖ (12) ರ ಪತ್ರದಲ್ಲಿನ ಅಂಶಗಳನ್ವಯ ಕವಿಪ್ರನಿನಿಯಲ್ಲಿ ಚಾಲ್ತಿಯಲ್ಲಿರುವ / ಕೈಗೊಳ್ಳಲಾಗುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ರ ಅಧಿನಿಯಮ 2 (ಡಿ) ಯ ವ್ಯಾಪ್ತಿಗೊಳಪಡುವ ಸಮಗ್ರ ಕಾರ್ಯ / ಅಂಶಿಕ ಕಾರ್ಯ ಮತ್ತು ಇತರೆ ಗುತ್ತಿಗೆಯ ಕಾಮಗಾರಿ ಬಿಲ್ಲುಗಳಲ್ಲಿ ಸಾಮಾಗ್ರಿ ಸರಬರಾಜು (Supply portion) ಮತ್ತು ಕೂಲಿ ವೆಚ್ಚಗಳನ್ನು (Labour Portion) ಪರಿಗಣಿಸಿ, ಶೇ.1% ರಷ್ಟು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕವನ್ನು ಕಡಿತಗೊಳಿಸಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಪಾವತಿಸಲು ಈ ಮೂಲಕ ಸೂಚಿಸಲಾಗಿದೆ.

20/3/18

ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

ಪ್ರತಿಗಳು:-

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಉಪ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ), ಕವಿಪ್ರನಿನಿ.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ) / (ಸಿವಿಲ್), ಕವಿಪ್ರನಿನಿ.
5. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಸದರಿ ಸುತ್ತೋಲೆಯನ್ನು ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ.
6. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
7. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕವಿಪ್ರನಿನಿ.
9. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ.
10. ವ್ಯವಸ್ಥಾಪಕರು (ಆ.ನಿ)/ ವ್ಯವಸ್ಥಾಪಕರು (ನ ಮತ್ತು ಲೆ), ಕವಿಪ್ರನಿನಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು.
11. ಎಲ್ಲಾ ಸಹಾಯಕ ಲೆಕ್ಕಾಧಿಕಾರಿಗಳು (ಅಂತರಿಕ ಪರಿಶೋಧನೆ), ಕವಿಪ್ರನಿನಿ.
12. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶರು ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ.ಸಂ)/ ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ನಿಗಮ ಕಾರ್ಯಾಲಯ, ಬೆಂಗಳೂರು.
13. ಮುಖ್ಯ ಕಡತ.